(1060)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹುಬ್ಬಳ್ಳಿ-ಧಾರವಾಡ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ೧) ಸರ್ಕಾರದ ಆದೇಶ ಸಂಖ್ಯೆ:ನಅಇ ೨೩೮ ಬೆಮಪ್ರಾ ೨೦೦೨, ದಿ: ೨೩.೦೧.೦೩

೨) ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ. ಹುಧಾನಪ್ರಾ:ಯೋವಿ:ಪ:ವ್ಯಾ:೬:ಯೋ: ... ದಿನಾಂಕ: ೨೩.೨.೦೩.

೩) ನಗರ ಯೋಜನಾ ನಿರ್ದೇಶಕರ ಪತ್ರ ಸಂಖ್ಯೆ. ನಯೋ(ಲ)೩೮೯/ಹುಧಾ ಆಯೋ/೦೩.

* * * * *

ಪ್ರಸ್ತಾವನೆ:

ಮೇಲೆ ಓದಲಾದ (೧) ರ ಸರ್ಕಾರಿ ಆದೇಶದಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಿದೆ.

ಮೇಲೆ ಓದಲಾದ (೨) ರ ಪತ್ರದಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಕೆಲವು ತಿದ್ದುಪಡಿಗಳನ್ನು ಮಾಡಲು ಸಾರ್ವಜನಿಕರಿಂದ ಸಲಹೆಗಳು / ಆಕ್ಷೇಪಣೆಗಳನ್ನು ಪ್ರಾಧಿಕಾರದ ದಿನಾಂಕ: ೨೦.೧.೦೩ ರ ವಿಶೇಷ ಸಭೆಯಲ್ಲಿ ಚರ್ಚಿಸಿ ನಗರ ಯೋಜನಾ ನಿರ್ದೇಶಕರೊಡನೆ ವಲಯ ನಿಯಮಾವಳಿಗಳನ್ನು ಚರ್ಚಿಸಿ ತಿದ್ದುಪಡಿಯೊಂದಿಗೆ ಅಂತಿಮಗೊಳಿಸಿ ಸರ್ಕಾರದ ಅನುಮೋದನೆಗೆ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ ರ ಕಲಂ ೨೫ ಮತ್ತು ೨೩ ರಡಿಯಲ್ಲಿ ಸಲ್ಲಿಸಿದ್ದಾರೆ.

ಮೇಲೆ ಓದಲಾದ (೩) ರ ನಗರ ಯೋಜನಾ ನಿರ್ದೇಶಕರ ಕಡತದಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಯೋಜನೆಯನ್ನು ೨೦೨೧ ನೇ ಸಾಲಿಗೆ ಅಂದಾಜಿಸಲಾದ ೧೭.೫೦ ಲಕ್ಷ ಜನ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಅಳವಡಿಸಲಾಗಿದೆ ಹಾಗೂ ಒಟ್ಟಾರೆ ಅಭಿವೃದ್ಧಿಗೆಂದು ೧೩,೭೪೭.೩೫ ಹೆಕ್ಟೇರ್ ಪ್ರದೇಶವನ್ನು ನಿಗದಿಗೊಳಿಸಲಾಗಿದೆ. ಈ ಪೈಕಿ ವಸತಿಗಾಗಿ ೫೬೮೩.೫೯ ಹೆಕ್ಟೇರ್ (ಶೇ. ೪೧.೩೦) ವಾಣಿಜ್ಯಕ್ಕಾಗಿ ೮೩೪.೮೮ ಹೆಕ್ಟೇರ್ (ಶೇ. ೬.೦೭) ಮತ್ತು ಕೈಗಾರಿಕೆಗಾಗಿ ೬೪೯.೬೨ ಹೆಕ್ಟೇರ್ (ಶೇ. ೪.೭೮) ಪ್ರದೇಶವನ್ನು ಕಾಯ್ದಿರಿಸಲಾಗಿದೆ ಎಂದು, ಇದಲ್ಲದೆ ಇತರೆ ಅಗತ್ಯ ಉಪಯೋಗಗಳಾದ ಉದ್ಯಾನವನ/ ಬಯಲು ಜಾಗ, ಸಾರ್ವಜನಿಕ/ ಅರೆ ಸಾರ್ವಜನಿಕ ಹಾಗೂ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳಿಗೆ ಅವಳಿ ನಗರಗಳ ಅಗತ್ಯತೆಗೆ ಅನುಗುಣವಾಗಿ ಸೂಕ್ತವಾದ ಕಡೆಗಳಲ್ಲಿ ಪ್ರದೇಶಗಳನ್ನು ಗುರುತಿಸಿದ್ದಾರೆಂದು ತಿಳಿಸುತ್ತಾ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ ರ ಕಲಂ ೨೨(೩) ರನ್ವಯ ಅನುಮೋದನೆ ನೀಡಬಹುದೆಂದು ವರದಿ ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ನಗರ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು
ಕ್ರ.ಸಂಖ್ಯೆ 499
ದಿನಾಂಕ 14/11/09

146
11-03

ಸರ್ಕಾರದ ಆದೇಶ ಸಂಖ್ಯೆ. ನಅಇ 201 ಬೆಮಪ್ರಾ 2001, ಬೆಂಗಳೂರು, ದಿನಾಂಕ: 12.11.2003.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ ರ ಕಲಂ ೨೨(೩) ರನ್ವಯ ಹುಬ್ಬಳ್ಳಿ-ಧಾರವಾಡ ನಗರಗಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಿದೆ.

೧) ಕಟ್ಟಡಗಳಲ್ಲಿ ಸೌರಶಕ್ತಿ ಬಳಕೆಯ ಬಗ್ಗೆ.
೨) ಕಟ್ಟಡ ನಿರ್ಮಾಣಗಳಲ್ಲಿ ಭೂಕಂಪನದ ಸುರಕ್ಷತೆಯ ಕುರಿತು ವಿಧಾನಗಳು.
೩) ಅಂಗವಿಕಲರಿಗೆ ಸೌಲಭ್ಯ ಒದಗಿಸುವುದು.
೪) ಮಳೆ ನೀರಿನ ಸಂಗ್ರಹಣೆಯ ಬಗ್ಗೆ ರೂಪಿಸಲಾದ ನಿಯಮಾವಳಿಗಳನ್ನು ವಲಯ ನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು.
೫) ಉಣಕಲ್ ಗ್ರಾಮದ ರಿ.ಸ.ನಂ.೬೩೯:೨+೩ ರಲ್ಲಿ ೭ ಎಕರೆ ೪ ಗುಂಟೆ, ಕೇಶ್ವಾಪುರ ಗ್ರಾಮದ ರಿ.ಸ.ನಂ.೬೬/೨ ರಲ್ಲಿ ೩ ಎಕರೆ ೧ ಗುಂಟೆ ಮತ್ತು ಉಣಕಲ್ ಗ್ರಾಮದ ರಿ.ಸ.ನಂ.೪೮೮ ರಲ್ಲಿ ೧೩ ಎಕರೆ ೩೨ ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಭೂ ಬಳಕೆಯನ್ನು ವಸತಿ ಉದ್ದೇಶಕ್ಕಾಗಿ ಮೀಸಲಿರಿಸುವುದು.

ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ, ಎಲ್ಲಾ ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಶ್ರೀಧರಮೂರ್ತಿ).
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

೧) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೨) ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.
೩) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
೪) ವಾರದ ಗೆಜೆಟ್.
೫) ಸರ್ಕಾರ ಕಾರ್ಯದರ್ಶಿಗಳು (ಪುರಸಭೆ ಮತ್ತು ಅಭಿವೃದ್ಧಿ ಪ್ರಾಧಿಕಾರ), ಇವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
೬) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.